ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1026

ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ್ ಗೌಡ

(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 22.12.2021.

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಅರ್ಕಾವತಿ ನದಿ ಕಾಲುವೆ (ಹಳ್ಳ) ಒತ್ತುವರಿ ಹಾಗೂ ಚನ್ನಾಪುರ ಗ್ರಾಮದ ಸರ್ವೆ ನಂ.30 ಮತ್ತು 78ರಲ್ಲಿ ಸರ್ಕಾರಿ ಕಾಲುವೆಗಳನ್ನು ಮುಚ್ಚಿ ಕೃಷಿ ಭೂಮಿ ಹಾಗೂ ಸರ್ಕಾರಿ ಗೋಮಾಳ ಜಮೀನಿನಲ್ಲಿ ಅಕ್ರಮವಾಗಿ ರೆಸಾರ್ಟ್ ನಡೆಸುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಚನ್ನಾಪುರ ಗ್ರಾಮದ ಸ.ನಂ. 78 ರಲ್ಲಿ ಡಿ.ಎಸ್. ಅರುಣ್ ಕುಮಾರ್ ಬಿನ್ ಲೇಟ್ ದೀನಾನಾಥಸಾಂಡ್ರ ರವರ ಹೆಸರಿಗೆ 1-22 ಎಕರೆ/ಗುಂಟೆ ಕ್ರಯದಂತೆ ಖಾತೆ ಹೊಂದಿದ್ದು, ಸದರಿ ಜಮೀನಿನಲ್ಲಿ ಪ್ರವಾಸೋದ್ಯಮ ಇಲಾಖೆ ಪತ್ರ ಸಂಖ್ಯೆ:KAR/HMST/BANR/DDBL/0004 ದಿನಾಂಕ:25.04.2019 ರಂತೆ ಹೋಮ್ ಸ್ಟೇ ಗೆ ಅನುಮತಿಯನ್ನು ನೀಡಿರುತ್ತಾರೆ. ಪ್ರಸ್ತಾಪಿತ ಚನ್ನಾಪುರ ಗ್ರಾಮದ ಸ.ನಂ.30 ಮತ್ತು 78 ರಲ್ಲಿ ಸರ್ಕಾರಿ ಹಳ್ಳದ ಬಗ್ಗೆ ತಾಲ್ಲೂಕು ಮೋಜಿಣಿದಾರರಿಂದ ಅಳತೆ ಮಾಡಿಸಲಾಗಿ ಸರ್ಕಾರಿ ಹಳ್ಳ ಒತ್ತುವರಿಯಾಗಿರುವುದು ಕಂಡುಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಸರ್ವೆ ನಕ್ಷೆಯಂತೆ ಸರ್ಕಾರಿ ಹಳ್ಳವನ್ನು ಸುಮಾರು 35 ಮೀಟರ್ ನಷ್ಟು ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ.

ಸಂಖ್ಯೆ: ಆರ್‌ಡಿ 268 ಎಲ್‌ಜಿಕ್ಯೂ 2021 (ಇ)

(ಆರ್.ಅಶೋಕ)

ಕಂದಾಯ ಸಚಿವರು